ಚಾಲಕರ ಹುದ್ದೆಗೆ ಬಂದ ಅರ್ಜಿಗಳ ಕುರಿತು

೧೮೦೯. ಶ್ರೀ ಗೋಪಾಲ ಮಂಕುಂದ ಕಾನಡೆ(ಸಿರ್ಸಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರಕನ್ನಡ ಜಿಲ್ಲೆಯಲ್ಲಿರುವ ಸಾರಿಗೆ ಸಂಸ್ಥೆಗೆ ಚಾಲಕರ ಹುದ್ದೆಗೆ ಕೀಳಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ? ಇದರಲ್ಲಿ ಹರಿಜನರ ಸಂಖ್ಯೆ ಎಷ್ಟು?

ಆ) ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ?

ಇ) ಈ ಹುದ್ದೆಗೆ ತೆಗೆದುಕೊಳ್ಳುವಾಗ ಅವ್ಯವಹಾರ ನಡೆದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಕೈಗೊಂಡ ಕ್ರಮವೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ೧೫೮೮ ಅರ್ಜಿಗಳು ಬಂದಿದ್ದು ೪೭ ಅರ್ಜಿಗಳನ್ನು ಹರಿಜನ ಅಭ್ಯರ್ಥಿಗಳು ಸಲ್ಲಿಸಿದ್ದರು.

ಆ) ೭೬ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು ಅವುಗಳಲ್ಲಿ ೨೦ ಹರಿಜನ ಅಭ್ಯರ್ಥಿಗಳಿರುತ್ತಾರೆ. ಆಯ್ಕೆಯಾದ ಅಭ್ಯರ್ಥಿಗಳನ್ನು ಕಾಯಂ ಪೂರ್ವ ಬದಲಿಯಾಗಿ ಉಪಯೋಗಿಸಲಾಗುತ್ತಿದೆ.

ಇ) ಮತ್ತು ಈ) ನೇಮಕಾತಿಯ ಆಯ್ಕೆಯ ಬಗ್ಗೆ ದೂರು ಬಂದಿದ್ದು ಅದನ್ನು ಸಂಸ್ಥೆಯ ಭದ್ರತಾ ಇಲಾಖೆಯಿಂದ ತನಿಖೆ ಮಾಡಿಸಲಾಗುತ್ತಿದೆ. ವರದಿ ಬಂದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿ ಹಸಿರು ಕಾರ್ಡ್‌ಗಳನ್ನು ಪಡೆದ ಕುಟುಂಬಗಳು

೨೩೫೦. ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯಾದ್ಯಾಂತ ಹಸಿರು ಕಾರ್ಡ್ ಪಡೆದಿರುವ ಕುಟುಂಬಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಹಸಿರುಕಾರ್ಡು ಪಡೆದವರಲ್ಲಿ ಕೆಲವರು ಅನುಕೂಲ ವಾಗಿರುವರೆಂಬ ದೂರು ಇದೆಯೆ? ಹಾಗಿದ್ದಲ್ಲಿ ಇಂತಹವರನ್ನು ಪಟ್ಟಿಯಿಂದ ತೆಗೆದು ಹಾಕಲು ಸರ್ಕಾರ ಕೈಗೊಂಡ ಕ್ರಮವೇನು ? (ವಿವರ ನೀಡುವುದು)

ಇ) ಬಹಳಷ್ಟು ಬಡವರು ಇದರ ಫಲ ಪಡೆಯದೆ ವಂಚಿತರಾಗಿರುವುದರ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಈ) ಈ ದಿಕ್ಕಿನಲ್ಲಿ ಚಿತ್ರದುರ್ಗ ಜಿಲ್ಲಾ ಪರಿಷತ್ತು ಹೊಸದಾಗಿ ಹಸಿರು ಕಾರ್ಡು ಸಮೀಕ್ಷೆ ನಡೆಸಿ ಅನುಮತಿಗಾಗಿ ಕಳುಹಿಸಿರುವ ಸಂಖ್ಯೆ ಎಷ್ಟು ? ಮತ್ತು ಯಾವಾಗ ವಿತರಿಸಲಾಗುವುದು ?

ಶ್ರೀ ಬಿಸವರಾಜ ಪಾಟೀಲ್ ತಿಮ್ಮನಗೌಡ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಮಂತ್ರಿಗಳು).—

ಅ) ಒಟ್ಟು ೩೧.೧೩ ಲಕ್ಷ ಜಿಲ್ಲಾವಾರು ವಿವರ ಲಗತ್ತಿಸಿದೆ. ತಾಲ್ಲೂಕುವಾರು ಮಾಹಿತಿಯನ್ನು ನಂತರ ಒದಗಿಸಲಾಗುವುದು.

ಆ) ಇದೆ. ಅನುಕೂಲಸ್ಥರಿಗೆ ನೀಡಿರುವ ಹಸಿರು ಪಡಿತರ ಚೀಟಿಯನ್ನು ರದ್ದು ಪಡಿಸುವಂತೆ ಜಿಲ್ಲಾ ಪರಿಷತ್ತುಗಳಿಗೆ ಸೂಚಿಸಲಾಗಿದೆ.

ಇ) ಗಮನಕ್ಕೆ ಬಂದಿರುವುದಿಲ್ಲ.

ಈ) ಇದುವರೆವಿಗೆ ಯಾವುದೇ ಪ್ರಸ್ತಾವನೆ ಬಂದಿಲ್ಲ.